- RPAD -

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 268 ಮೈಅಪ್ರಾ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, 4ನೇ ಮಹಡಿ,
ಬೆಂಗಳೂರು, ದಿನಾಂಕ: 30.06.2016.

ಸುತ್ತೋಲೆ

ವಿಷಯ: ನಗರ ಯೋಜನಾ ನಿಯಮಗಳಲ್ಲಿ ಪೆಟ್ರೋಲ್ ಪಂಪ್ಸ್ ಮತ್ತು ಎಲ್.ಪಿ.ಜಿ. ದಾಸ್ತಾನು ಮಳಿಗೆಗಳಿಗೆ ನಿವೇಶನ ಕಾಯ್ದಿರಿಸುವ ಹಾಗೂ (ಪೆಟ್ರೋಲಿಯಂ ಹಾಗೂ ಪೆಟ್ರೋಲ್ ಕೆಮಿಕಲ್) ಘಟಕಗಳ ಸುತ್ತಲು 300 ಮೀ ಹಸಿರು ಪಟ್ಟಿ (Buffer) ಅಳವಡಿಸುವ ಬಗ್ಗೆ.

ಉಲ್ಲೇಖ: 1) ಪೆಟ್ರೋಲಿಯಂ ಹಾಗೂ ನೈಸರ್ಗಿಕ ಇಂಧನ ಸಚಿವಾಲಯದ ಅರೆ ಸರ್ಕಾರಿ ಪತ್ರ ಸಂಖ್ಯೆ: P-10014/06/2013–OMC, ದಿನಾಂಕ: 02.04.2014.

2) ಪೆಟ್ರೋಲಿಯಂ ಹಾಗೂ ನೈಸರ್ಗಿಕ ಇಂಧನ ಸಚಿವಾಲಯದ ಅರೆ ಸರ್ಕಾರಿ ಪತ್ರ ಸಂಖ್ಯೆ: R–29011/9/2010–OR–01, ದಿನಾಂಕ: 02.04.2013.

****

ಜಂಟಿ ಕಾರ್ಯದರ್ಶಿಗಳು, ಭಾರತ ಸರ್ಕಾರದ ಪೆಟ್ರೋಲಿಯಂ ಹಾಗೂ ಸ್ವಾಭಾವಿಕ (ನೈಸರ್ಗಿಕ) ಇಂಧನ ಸಚಿವಾಲಯ, ನವದೆಹಲಿ ಇವರ ಅರೆ ಸರ್ಕಾರಿ ಪತ್ರ ದಿನಾಂಕ: 02.02.2014ರ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಸಾರ್ವಜನಿಕ ವಲಯದ ಇಂಧನ ಮಾರಾಟ ಕಂಪನಿಗಳಾದ ಇಂಡಿಯನ್ ಆಯಿಲ್ ಕಾರ್ಪೋರೇಶನ್ ಲಿ., ಭಾರತ್ ಪೆಟ್ರೋಲಿಯಂ ಕಾರ್ಪೋರೇಶನ್ ಲಿ., ಹಾಗೂ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಶನ್ ಲಿ., ಸಂಸ್ಥೆಗಳು ಪೆಟ್ರೋಲಿಯಂ ಉತ್ಪನ್ನಗಳ ಹಂಚಿಕೆ ಕಾರ್ಯವನ್ನು ನಿರ್ವಹಿಸುತ್ತಿದ್ದು, ಪ್ರಸ್ತುತ ನಗರ ಪ್ರದೇಶಗಳಲ್ಲಿ ಭೂಮಿಯ ಬೆಲೆ ಹೆಚ್ಚಾಗಿರುವುದರಿಂದ, ಪೆಟ್ರೋಲಿಯಂ ಪಂಪ್‌ಗಳ ಅಳವಡಿಕೆ ಹಾಗೂ ಎಲ್.ಪಿ.ಜಿ. ದಾಸ್ತಾನಿಗೆ ಮಳಿಗೆ ನಿರ್ಮಿಸಲು ಭೂಮಿ ಪಡೆಯುವುದು ಕಷ್ಟದಾಯಕವಾಗಿದೆ.

ಮೇಲ್ಕಂಡ ಸಾರ್ವಜನಿಕ ವಲಯದ ಕಂಪನಿಗಳು ಪೆಟ್ರೋಲಿಯಂ ಉತ್ಪನ್ನಗಳ ಹಂಚಿಕೆ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅನಿವಾರ್ಯವಾಗಿರುತ್ತದೆ. ಆದ್ದರಿಂದ, ಮೇಲ್ಕಂಡ ಕಂಪನಿಗಳಿಗೆ ಅಗತ್ಯವಾದ ಭೂಮಿಯನ್ನು ಕಾಯ್ದಿರಿಸುವ ಬಗ್ಗೆ ನಗರ ಯೋಜನಾ ನಿಯಮಾವಳಿಗಳಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡುವ ಸಂಬಂಧ ಈ ಕೆಳಕಂಡ ಸಲಹೆಗಳನ್ನು ಗಮನಿಸಬಹುದಾಗಿದೆ.

i) Retailing of automotive and cooking fuels (MS/HSD/LPG) as an essential public utility services for which land should be mandatorily reserved in Government lands available with in the Local planning Area, further this facility shall be incorporated as allowable use in all non-residential zones and agricultural zones in the Master Plan.

ii) Provide for seeking mandatory NOC from the PSU OMCs for existing fuels (MS/HSD/LPG) retail sites before allowing change of land use.

..2..

iii) Revisit Previously approved master plan and reserve land for fuel outlets by reallocating land reserved for other less essential purpose (public utilities)

iv) With regard to reservation of land for fuel retailing purpose, it should be inter-alia, ensured that the land reserved has all weather motorable/public road access, it is nit in congested areas, is at a distance from residential areas, at a safe distance from overhead power transmission/telephone lines, and ensure that no drainage/nullahs/canals run through the plot.

v) In terms of size of plots, a minimum plot size of 40 mtr. X 40 mtr. On NH and 30 mtr. X 30 mtr. For other locations may be provided for petrol/diesel outlets and plots between 25 mtr. X 30 mtr. to 31 mtr. X 36 mtr. for LPG godowns.

ಎಲ್ಲಾ ಪ್ರಾಧಿಕಾರಗಳು ಆಯಾ ನಗರ/ಪಟ್ಟಣಗಳ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಮಹಾಯೋಜನೆಯನ್ನು ಸಿದ್ಧಪಡಿಸುವ ಸಂದರ್ಭಗಳಲ್ಲಿ ಪೆಟ್ರೋಲಿಯಂ ಹಾಗೂ ನೈಸರ್ಗಿಕ ಮಂತ್ರಾಲಯವು ನೀಡಿರುವ ಮೇಲ್ಕಂಡ ಸಲಹೆಗಳನ್ನು ಸೂಕ್ತವಾಗಿ ಅಳವಡಿಸಿಕೊಳ್ಳುವಂತೆ ಕಟ್ಟುನಿಟ್ಟಾಗಿ ನಿರ್ದೇಶನ ನೀಡಿದೆ.

ಮುಂದುವರೆದು, ಉಲ್ಲೇಖ (2)ರ ಕೇಂದ್ರ ಸರ್ಕಾರದ ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಸಚಿವಾಲಯದ ಪತ್ರ ದಿನಾಂಕ: 02.04.2013ರಲ್ಲಿ ಪೆಟ್ರೋಲಿಯಂ ಹಾಗೂ ಪೆಟ್ರೋ ಕೆಮಿಕಲ್ ಸ್ಥಾಪನೆಗಳು ಹಾಗೂ ಘಟಕಗಳಿಂದಾಗುವ ಅಪಾಯಕರ ಪರಿಣಾಮಗಳಿಂದ ಸಂರಕ್ಷಿತ ವ್ಯವಸ್ಥೆಯಾಗಿ ಸೂಕ್ತ ಸಂರಕ್ಷಣ ಪ್ರದೇಶವನ್ನು ನಿಗದಿಪಡಿಸಲು ಹಾಗೂ ನಿರ್ವಹಿಸಲು ಕ್ರಮ ಜರುಗಿಸಬೇಕಾಗಿ ಶ್ರೀ ಎಂ.ಬಿ.ಲಾಲ್ ಇವರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯು ಶಿಫಾರಸ್ಸು ಮಾಡಿರುವುದಾಗಿ ತಿಳಿಸಲಾಗಿದೆ.

ಪೆಟ್ರೋಲಿಯಂ ಹಾಗೂ ಪೆಟ್ರೋ ಕೆಮಿಕಲ್ ಇನ್‌ಸ್ಟಾಲೇಶನ್ ಸುತ್ತಲು 300 ಮೀ. ಹಸಿರು ಪಟ್ಟಿ (Buffer) ಯನ್ನು ಮಹಾಯೋಜನೆಗಳನ್ನು ತಯಾರಿಸುವಾಗ / ಪರಿಷ್ಕರಿಸುವಾಗ ಅಳವಡಿಸಿಕೊಳ್ಳಲು ಸೂಚಿಸಿದೆ. ಅಲ್ಲದೇ ಸ್ಥಳೀಯ ಯೋಜನಾ ಪ್ರದೇಶದೊಳಗೆ ಇರುವ ಇನ್‌ಸ್ಟಾಲೇಶನ್ ಸುತ್ತಲು 300 ಮೀ. ಹಸಿರುಪಟ್ಟಿ (Buffer) ಯನ್ನು ಅಳವಡಿಸದೆ ಇದ್ದಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಉಲ್ಲೇಖ (2)ರ ಕೇಂದ್ರ ಸರ್ಕಾರದ ಪತ್ರವನ್ನು ಇದರೊಂದಿಗೆ ಅಡಕಗೊಳಿಸಿದೆ.

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಸಂ:ನಗ್ರಾಯೋ:ಜಂ.ನಿ: :2015-16

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ,
ಬಹುಮಹಡಿಗಳ ಕಟ್ಟಡ, 4ನೇ ಹಂತ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕಃ 20 JUL 2016

ಯಥಾ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

1. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ.
2. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು.
3. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಬೆಂಗಳೂರು/ಮೈಸೂರು/ಗುಲ್ಬರ್ಗಾ.
4. ಆಯುಕ್ತರು/ ನಗರ ಯೋಜಕ ಸದಸ್ಯರು ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
5. ಸದಸ್ಯ ಕಾರ್ಯದರ್ಶಿಗಳು, ರಾಜ್ಯದ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳು.
6. ಮುಖ್ಯಾಧಿಕಾರಿಗಳು/ಪೌರಾಯುಕ್ತರು, ಪುರಸಭೆ/ ನಗರಸಭೆ ಯೋಜನಾ ಪ್ರಾಧಿಕಾರಗಳು.
7. ಎಲ್ಲಾ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿಗಳಿಗೆ.
8. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿ ಮತ್ತು ತಾಂತ್ರಿಕ ಸಿಬ್ಬಂದಿಗಳಿಗೆ.
9. ಹೆಚ್ಚುವರಿ ಪ್ರತಿಗಳು.

Mandale. M.S.
16.7.16.

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಪರವಾಗಿ